# ನಾಲಗೆಯಂ ಮಾರಿದೆಂ

'ನಾಲಗೆಯಂ ಮಾರಿದೆಂ' ಎಂಬ ಮಾತು ಹದಿಮೂರನೆಯ ಶತಮಾನದ ನಮ್ಮ ಕವಿ ಹರಿಹರನದು. ಅವನದೊಂದು ಬಗೆಯ ಕಟು ಶಿವನಿಷ್ಠೆ, ಭಕ್ತಿ. ಅನ್ಯ ದೇವರನ್ನು ಅವನು ಅಪ್ಪಿತಪ್ಪಿಯೂ ಸ್ಮರಿಸಲಾರ! ಅವನು ತನ್ನ ಮನಸ್ಸನ್ನು ಶಿವನ ಸ್ಮರಣೆಗೆ ಮಾತ್ರ ಮೀಸಲಿಟ್ಟಿದ್ದ; ತನ್ನ ನಾಲಗೆಯನ್ನು ಕೇವಲ ಶಿವನ ಸ್ತುತಿಗೆ ಮಾತ್ರ ಬಳಸುತ್ತಿದ್ದ. ನಾಲಗೆಯನ್ನು ಶಿವನಿಗೆ ಮತ್ತು ಶಿವಶರಣರಿಗೆ 'ಮಾರಿದೆಂ' ಅನ್ನುತ್ತಾನೆ. ಈ ರೀತಿ ಅನ್ನಲು ಕೂಡ ಹುಚ್ಚು ಧೈರ್ಯಬೇಕು. ಈ ಅಚಲ ನಂಬಿಕೆ ಮತ್ತು ವಿಶ್ವಾಸಗಳಿಂದ ಶಿವಶರಣರ ಅಥವಾ ಶಿವಸ್ತುತಿಗೆ ತನ್ನ ನಾಲಗೆಯನ್ನು ಮಾರಿಕೊಂಡಿದ್ದೇನೆಂದು ಯಾವ ಎಗ್ಗೂ ಇಲ್ಲದೆ ಹೇಳುತ್ತಾನೆ. ಈ ಮಾತನ್ನು ಆಡುವಾಗ ಅವನಿಗೆ ಅಳುಕಿಲ್ಲ; ಅದರ ಬದಲು ವೀರ ಅಭಿಮಾನವಿದೆ!

ಉದಾತ್ತ ಚರಿತನೂ ಸತ್ಯಕ್ಕಾಗಿ ತನ್ನ ಸಮಸ್ತವನ್ನೂ ತ್ಯಾಗ ಮಾಡಲು ಸಿದ್ಧನಾದ 'ಮಾನವ' ಹರಿಶ್ಚಂದ್ರನನ್ನು ನಾಯಕನನ್ನಾಗಿಸಿ 'ಹರಿಶ್ಚಂದ್ರ ಕಾವ್ಯ'ವನ್ನು ಬರೆದು ಕವಿ ರಾಘವಾಂಕನು ತನ್ನ ಸೋದರ ಮಾವನಾದ ಹರಿಹರನಿಗೆ ಅರ್ಪಿಸಲು ಹೋದಾಗ, 'ಮಾನವ'ನನ್ನು ಸ್ತುತಿಸಿ ಕಾವ್ಯ ಬರೆದಿರುವ ಅಳಿಯ ರಾಘವಾಂಕನ ಕೆನ್ನೆಗೆ ಹಲ್ಲು ಉದುರುವ ಹಾಗೆ ಹೊಡೆದನೆಂಬ ದಂತ ಕತೆಯೂ ಇದೆ. ಅದು ದಂತ ಕಥೆಯೆಂದೇ ನಂಬೋಣ. ಆದರೆ ಆ ಕಥೆಯ ಆಶಯವು ಹರಿಹರನ ರುದ್ರ ನಿಷ್ಠೆಯನ್ನೂ, ಮತ ನಿಷ್ಠೆಯನ್ನೂ ಮತ್ತು ವ್ಯಕ್ತಿ ವಿಶೇಷಗಳ ವಿರೋಧಿ ಮನಸ್ಥಿತಿಯನ್ನು ತಿಳಿಸುತ್ತದೆ. ಅವನು ತನ್ನ 'ಪಂಪಾಶತಕ'ದಲ್ಲಿ ಹೀಗೆ ಹೇಳುತ್ತಾನೆ:

ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ
ಅಕ್ಕಟಾ, ತನತನಗೆ ಇಂದ್ರ ಚಂದ್ರ ರವಿ ಕರ್ಣ ದಧೀಚಿ
ಬಲೀಂದ್ರನೆಂದು ಮೇಣ್
ಅನವರತಂ ಪೊಗಳ್ದು ಕೆಡಬೇಡ.

ಹರಿಹರನಿಗೆ 'ಸಾಯುವ' ಮನುಷ್ಯರು ಮುಖ್ಯವಲ್ಲ; ಅವರ ಬಗ್ಗೆ ಬರೆವುದು, ಕಾವ್ಯ ಬರೆದು ಸ್ತುತಿಸುವುದು 'ಕೆಡುವ' ಕಾಯಕ. ಶಿವನನ್ನು ಅಥವಾ ಶಿವಭಕ್ತರನ್ನು ಕುರಿತು ಬರೆವುದು ಸಾರ್ಥಕ ಕೆಲಸ. ಅವನ ದೃಷ್ಟಿಯಲ್ಲಿ ಶಿವಭಕ್ತರು ಮನುಷ್ಯರಲ್ಲ, ಅವರು ಶಿವಸ್ವರೂಪಿಗಳು. ಆದ್ದರಿಂದಲೇ ಅವರು ನೇರವಾಗಿ– ನಾನಾ ಕಾರಣಗಳಿಂದ– ಭೂಲೋಕಕ್ಕೆ ಬಂದ ಗಣಗಳು ಅಥವಾ ಕೈಲಾಸವಾಸಿಗಳು. ಆದುದರಿಂದಲೇ ಅವರನ್ನು ಹರಿಹರ ಅಯೋನಿಜನಕರೆಂದು ಕರೆಯುತ್ತಾನೆ. (ಮಾನವರು ಮಾತ್ರ ಜನಿಸುತ್ತಾರೆ; ಸಾಯುತ್ತಾರೆ.) ಅವರು ಈ ಭೂಮಿಗೆ ಬಂದು ಕೆಲಸ ನಿರ್ವಹಿಸಿದ ನಂತರ ಕೈಲಾಸದಿಂದ ವಿಮಾನವೊಂದು ಬಂದು ಅವರನ್ನು ಕರೆದುಕೊಂಡು ಹೋಗುತ್ತದೆ!

ಹರಿಹರನದು ದೈವಪರವಾದ ನಿಲವು. ಅವನು ಮಾನವ ಪರವಾಗಿ ಯೋಚಿಸುವುದು ಅಹಿತವೆಂದು ಭಾವಿಸುತ್ತಾನೆ! ಆದರೆ ಅವನಿಗಿಂತ ಮೊದಲಿದ್ದ ವಚನಕಾರರು ಮಹಾ ಮಾನವತಾವಾದಿಗಳಾಗಿದ್ದರೆಂಬುದು ಐತಿಹಾಸಿಕ ಸತ್ಯ. ಅಂಥವರನ್ನು ಕಾವ್ಯನಾಯಕರನ್ನಾಗಿಸಿ ಇದೇ ಹರಿಹರ ಕಾವ್ಯಗಳನ್ನು ಬರೆದಿದ್ದಾನೆಂಬುದೂ ಸತ್ಯ! ಆದರೆ ಕೇವಲ ಒಂದು ಶತಮಾನದ ಅಂತರದಲ್ಲಿ ಹರಿಹರ ವಚನಕಾರರಿಗೆ ಅವರ ಮಾನವ ವೇಷ ಕಳಚಿ, ದೈವದುಡುಗೆಯನ್ನು ತೊಡಿಸಿಬಿಡುತ್ತಾನೆ! ಇದು ಚರಿತ್ರೆಯ ವ್ಯಂಗ್ಯ!

ಕನ್ನಡ ಸಾಹಿತ್ಯ ಚರಿತ್ರೆಯುದ್ದಕ್ಕೂ ಮತ ಧರ್ಮ ಸಿದ್ಧಾಂತಗಳ ಮಂಡನೆಗಾಗಿ ಕಥಾ ರೂಪಕಗಳನ್ನು ಹೇಳಿಕೊಂಡು ಬಂದಿದೆ. ಸಾಹಿತ್ಯವನ್ನು ಪ್ರಚಾರ ಮಾಧ್ಯಮವನ್ನಾಗಿ ಬಳಸಿಕೊಂಡಿದೆ. ಆ ಪ್ರಕ್ರಿಯೆ ಆಧುನಿಕ ಕಾಲದಲ್ಲೂ ಬೇರೆ ಬೇರೆ ರೂಪಗಳಲ್ಲಿ ಅಭಿವ್ಯಕ್ತಿ ತಳೆದಿದೆ. ಧರ್ಮ ಸಿದ್ಧಾಂತಗಳೆಲ್ಲವೂ ಮನುಷ್ಯನ (–ಜೀವಿಗಳ) ಉದ್ಧಾರದ ಮಂತ್ರವನ್ನೇ ಜಪಿಸುತ್ತವೆ. ಆದರೆ ಭೌತಿಕ ನೆಲೆಯಲ್ಲಿ ಅವನ ಅಸ್ತಿತ್ವದ ಸ್ವರೂಪವನ್ನು, ವಾಸ್ತವತೆಯನ್ನು ತುಂಬ ಹಗುರವಾಗಿ ಕಾಣುತ್ತವೆ. ಅವನ ಉದ್ಧಾರವೆಂಬುದು ಅಮೂರ್ತರೂಪಿಯಾದ ಬೇರೊಂದು ಲೋಕದಲ್ಲಿದೆಯೆಂದೂ ಅದರ ಸಾಧನೆಯೇ ಈ ಲೋಕದ ಬದುಕಿನ ಪ್ರಮುಖ ಆಶಯವಾಗಿರಬೇಕೆಂದು ಒತ್ತಿ ಹೇಳುತ್ತವೆ. ಮಾನವತೆಯ ಉದ್ಧಾರವೆಂದರೆ ದೈವಕೃಪೆಯ ಸಾಧನೆಯೆಂದೇ ನಂಬಿಸಲು ಯತ್ನಿಸುತ್ತವೆ. ಆ ಕಾರಣದಿಂದಲೇ ಆ ಅಮೂರ್ತ ಸ್ವರೂಪಿಯಾದ ದೇವರನ್ನು ಒಲಿಸಿಕೊಳ್ಳಲು ಅವನನ್ನು ಸ್ತುತಿಸಬೇಕಾಗುತ್ತದೆ. ಅದಕ್ಕಾಗಿ ನಮ್ಮ ನಾಲಗೆಯನ್ನು ನಾವು ಮಾರಬೇಕಾಗುತ್ತದೆ! ಇದು ಎಂಥ ವಿಪರ್ಯಾಸ ಅಲ್ಲವೆ?

ಇಂದು ವರ್ತಮಾನದಲ್ಲು ಕೂಡ, ಆಧುನಿಕತೆಯ, ವ್ಯಕ್ತಿ ಸ್ವಾತಂತ್ರ್ಯದ, ವೈಚಾರಿಕ ಯುಗದಲ್ಲು ಕೂಡ ನಾವು ನಮ್ಮ ನಾಲಗೆಯನ್ನು ನಮ್ಮ ನಾನಾ ಬಗೆಯ ಸ್ವಾರ್ಥಗಳ ಈಡೇರಿಕೆಗಾಗಿ ಮಾರಿಕೊಳ್ಳುತ್ತೇವೆ. ನಮ್ಮ ಸುತ್ತಲಿನ ಅಸತ್ಯವನ್ನು ಸತ್ಯವೆಂದೂ, ಅಸಮಾನತೆಯನ್ನು ಸಾಮಾಜಿಕ ನ್ಯಾಯವೆಂದೂ ಕರೆದು ಪ್ರಭುತ್ವವನ್ನು ಸ್ತುತಿಸುತ್ತೇವೆ. ಅಥವಾ ಕಂಡ ಸತ್ಯವನ್ನು ಹೇಳಲಾರದ ಸ್ಥಿತಿಗೆ ನಮ್ಮ ನಾಲಗೆಯನ್ನು ನಾವೇ ನಿಶ್ಚಲಗೊಳಿಸಿಕೊಳ್ಳುತ್ತೇವೆ.

**–ಶಿಕಾಕು**

## ಮಾತೇ ಮುತ್ತು

★ ಎಲ್ಲರ ಪ್ರಶಂಸೆಗೆ ಪಾತ್ರನಾಗುವ ವ್ಯಕ್ತಿಯ ಹಿಂದೆ, ಯಾರಿಗೂ ಕಾಣದಂತೆ, ತಮ್ಮ ಅಸ್ತಿತ್ವವನ್ನು ಹೊರಗೆ ತೋರಿಸದೆ ಇರುವ ಸಣ್ಣ ವ್ಯಕ್ತಿಗಳ ಕಾಣಿಕೆ ಇರುತ್ತದೆ.

–ಲಾಲ್ ಬಹದ್ದೂರ್ ಶಾಸ್ತ್ರಿ

★ ಉದಾರ ಮನಸ್ಸಿನವರು ಬೇರೆ ಧರ್ಮಗಳಲ್ಲಿ ಸತ್ಯವನ್ನು ಕಾಣುತ್ತಾರೆ. ಸಣ್ಣ ಮನಸ್ಸಿನವರು ಕೇವಲ ಅಂತರವನ್ನು ಕಾಣುತ್ತಾರೆ.

–ಚೀನಿ ಗಾದೆ

★ ಬೇರೆಯವರನ್ನು ತೆಗಳುವುದರಿಂದ ನಿಮ್ಮ ವ್ಯಕ್ತಿತ್ವಕ್ಕೇ ಹೆಚ್ಚು ಕುಂದುಂಟಾಗುತ್ತದೆ.

–ಶಿವರಾಮ ಕಾರಂತ

★ ನೀನು ಬೇರೆಯವರಿಗೆ ಮಾಡಿರುವ ಉಪಕಾರವನ್ನು ಮರೆಯುವುದು ಮತ್ತು ನಿನ್ನೊಡನೆ ಕೆಟ್ಟದಾಗಿ ನಡೆದುಕೊಂಡು ಕೆಟ್ಟದ್ದು ಮಾಡಿರುವುದನ್ನು ಮರೆಯುವುದು ಒಳಿತು.

–ಲುಕ್‌ಮಾನ್

★ ಪುರುಷರಲ್ಲಿನ ಕೊರತೆಗಳಲ್ಲಿ ಸ್ವಾರ್ಥ ತುಂಬಿರುತ್ತದೆ, ಸ್ತ್ರೀಯರ ಕೊರತೆಗಳಲ್ಲಿ ದೌರ್ಬಲ್ಯವಿರುತ್ತದೆ.

–ವೆಂಕಟಲಕ್ಷ್ಮಮ್ಮ

★ ಅಂಧಕಾರದ ಇನ್ನೊಂದು ಬದಿಯಲ್ಲಿ ಪ್ರಕಾಶ ಇರುತ್ತದೆ.

–ಪಿ.ಬಿ.ಶೆಲ್ಲಿ

★ ಜೀವಿಗಳನ್ನು ಹಿಂಸಿಸುವವನು ಆರ್ಯ ಅಲ್ಲ, ಎಲ್ಲ ಜೀವಿಗಳ ಬಗ್ಗೆ ಅಹಿಂಸೆಯಿಂದ ಇರುವವನೇ ಆರ್ಯ.

–ಗೌತಮ ಬುದ್ಧ

★ ಆಸೆ, ನಂಬಿಕೆ ಮತ್ತು ದಾನ– ಈ ಮೂರು ಸದ್ಗುಣಗಳು. ಇದರಲ್ಲಿ ದಾನ ಎಲ್ಲಕ್ಕಿಂತ ದೊಡ್ಡದು.

–ಮಹಾಭಾರತ

★ ದೊಡ್ಡವರು ಹೆಚ್ಚಾಗಿ ಮಕ್ಕಳಿಂದ ಕಲಿಯಲು ಸಾಧ್ಯವಿದೆ.

–ಸುಬ್ರಹ್ಮಣ್ಯ ಭಾರತಿ

★ ಕಷ್ಟಗಳನ್ನು ಸಹಿಸಿದಾಗ ಜಾದೂ ನಡೆಯುತ್ತದೆ.

–ಮಹಾತ್ಮ ಗಾಂಧೀಜಿ

★ ನಾನು ಪರ್ವತವನ್ನು ಅಲುಗಾಡಿಸಬಲ್ಲೆ ಎಂಬ ನಂಬಿಕೆ ನನಗಿದೆ. ಆದರೆ ದಯೆಯಿಲ್ಲದಿದ್ದರೆ ನಾನು ಏನೂ ಅಲ್ಲ. ನನ್ನಿಂದ ಏನೂ ಆಗುವುದಿಲ್ಲ.

–ಬೈಬಲ್

★ ಇತಿಹಾಸ ಎಂದೂ ಘಟಿಸಿರದ ಒಂದು ಘಟನೆ. ಅದರ ಲೇಖಕನೆಂದರೆ ಘಟನೆ ನಡೆದ ಸಮಯದಲ್ಲಿ ಉಪಸ್ಥಿತನಾಗಿಲ್ಲದವನು.

–ಅಜ್ಞಾತ

★ ಸಮಸ್ಯೆಗಳಿಗಿಂತ ಕೆಲವು ಪರಿಹಾರಗಳೇ ಕೆಟ್ಟದಾಗಿರುತ್ತವೆ.

–ಪಬ್ಲಿಯಸ್ ಸೈರಸ್